

ಕಾಮ್ರೇಡ್ ಸಾಕೇತ್ ರಾಜನ್



ಕಾಮ್ರೇಡ್ ಶಿವಲಿಂಗು

★ ಸಂಗಾತಿ ಸಾಕೇತ್ ಕಾಣದಾದೆ
ಎಲ್ಲಿ ಮರೆಯಾದೆ ...
ಜನರ ಬದುಕಿಗಾಗಿ
ಪ್ರಾಣ ಅರ್ಪಿಸಿದೆ ...
ನಮ್ಮ ಹೊಣೆಯ ಹೆಚ್ಚಿಸಿದೆ

ಶಸ್ತ್ರವಿಲ್ಲದೆ ದುಡಿವ ಜನತೆಗೆ
ಕಷ್ಟ ತೊಲಗುವ ಮಾರ್ಗವಿಲ್ಲ
ಎಂದು ಹೇಳಿ ನೊಂದ ಜನತೆಗೆ
ಶಸ್ತ್ರ ಒಪ್ಪಿಸಿದೆ ...
ಕೆಂಪು ಪಡೆಯ ಕಟ್ಟಿದೆ ನೀ ...

ಮಲೆನಾಡಿನ ಗಿರಿಗಳಲ್ಲಿ
ಆದಿವಾಸಿ ಹೃದಯಗಳಲ್ಲಿ
ಕೆಂಪು ಮುದ್ರೆಯ ಒತ್ತಿ ನೀನು
ಕೆಚ್ಚು ತುಂಬಿದೆಯಾ ...
ಕದನಕೆ ಸಜ್ಜುಗೊಳಿಸಿದೆಯಾ

ಹೊಣೆಯ ಮರೆತು
ಪದವಿ ಆಸೆಯ
ಹಿಂದೆ ಬೀಳುವ ಬುದ್ಧಿಜೀವಿ
ಬಲ್ಲ ಬುದ್ಧಿಯ ಜನತೆಗಾಗಿ
ಮೀಸಲಿಡಿ ಎಂದೆ ....
ಹಾಗೇ ನಡೆದು ತೋರಿದೆ ನೀ

★ ಆಲದ ಬೀಳು ಮರವ ಹಬ್ಬಿಸುವಂತೆ
ವಿದ್ಯಾರ್ಥಿಯಾಗಿ ಕ್ರಾಂತಿ ಕರ್ತವ್ಯ ಪೂರೈಸಲು
ಬಯಲುಸೀಮೆಯಿಂದ ಮಲೆನಾಡ ಸೀಮೆಗೆ ಒಲಿದ
ಸಂಗಾತಿ ನೀನು ಎಂದಿಗೂ ಅಮರ

ವಿದ್ಯಾರ್ಥಿಗಳಿಗೆಲ್ಲಾ ಸಂದೇಶ
ನಿನ್ನ ಕ್ರಾಂತಿ ಆಚರಣೆ ಶತೃವಿನ ನಿದ್ದೆಗೆಡಿಸಿತು
ಅದು ಸರ್ವಕಾಲಕ್ಕೂ ಆದರ್ಶ
ಮಡಿದರೂ ಮೃತ್ಯುವನ್ನು ಜಯಿಸುವ ದಾರಿಯಲ್ಲಿ
ಮರಣವನ್ನು ಉತ್ಕೃಷ್ಟ ಸಂಸ್ಕಾರವಾಗಿ ಆಚರಿಸಿದ
ಸಂಗಾತಿ ಶಿವಲಿಂಗು ನೀ
ಇಂದು ತಮ್ಮ ಮಣ್ಣಿನ ನೆಲೆಯಲ್ಲೇ ಕಳೆದುಹೋಗುತ್ತಿರುವ
ಹಲವು ಆಮಿಷಜಾಲಗಳಲ್ಲಿ ಸಿಲುಕಿರುವ
ವಿದ್ಯಾರ್ಥಿಗಳಿಗೆ ಮಾದರಿ

ಸಾಮ್ರಾಜ್ಯವಾದಿ ಜಾಗತಿಕ ಗೂಂಡಾಗಿರಿ, ಅವರ ದಲ್ಲಾಳಿಗಳು,
ಭೂಮಾಲೀಕರು ಎದುರಾದರೂ
ಪ್ರಾಣವನ್ನು ಲೆಕ್ಕಿಸದೆ ದೃಢವಾಗಿ ಮುನ್ನಡೆದ
ನಿಮ್ಮಿಬ್ಬರ ಅಮರತ್ವದ ಆಶಯಕ್ಕೆ ಲಾಲ್ ಸಲಾಂ
ನಿಮ್ಮ ಉತ್ಕಟ ದೇಶಪ್ರೇಮಕ್ಕೆ ಲಾಲ್ ಸಲಾಂ

**ಹುತಾತ್ಮರಾದ ದಿನ : 6 ಫೆಬ್ರವರಿ, 2005**

**ಸ್ಥಳ : ಮೆಣಸಿನಹಾಡ್ಯ**